ಕ್ರ ಸಂ.	ಜಿಲ್ಲೆಗಳು	ಬಂದಿರುವ ಅರ್ಜಿಗಳ ವಿವರ (ಸಂಖ್ಯೆಯಲ್ಲಿ)
26	ಕೊಪ್ಪಳ	2086
27	ಬಳ್ಳಾರಿ	809
28	ಗುಲ್ಬರ್ಗಾ	4
29	ಬೀದರ್	928
30	ಯಾದಗಿರಿ	1088
	ಒಟ್ಟು	**73953**

ಮೀನು ಸಾಕಾಣಿಕೆ ಬಗ್ಗೆ

2 (25) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್-ಕರ್ನಾಟಕದಲ್ಲಿರುವ ಮೀನು ಸಾಕಾಣಿಕೆ ಕೇಂದ್ರಗಳ ಸಂಖ್ಯೆ ಎಷ್ಟು ; ಅವು ಯಾವುವು ; (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಮೀನು ಸಾಕಾಣಿಕೆ ಮಾಡುವ ಮೀನುಗಾರರಿಗೆ ಸರ್ಕಾರ ನೀಡುವ ಸೌಲಭ್ಯಗಳೇನು ; (ವಿವರಗಳನ್ನು ನೀಡುವುದು)

ಇ) ಮೀನು ಸಾಕಾಣಿಕೆ ಮಾಡುವ ಮೀನುಗಾರರಿಗೆ ನೀಡುವ ಸಾಲಕ್ಕೆ ಸರ್ಕಾರ ಸಹಾಯ ಧನವನ್ನು ನೀಡುತ್ತಿದೆಯೇ ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಸಹಾಯ ಧನವನ್ನು ನೀಡಲಾಗುತ್ತಿದೆ ;

ಉ) ಮೀನು ಸಾಕಾಣಿಕೆ ಮಾಡುವ ಮೀನುಗಾರರಿಗೆ ಸರ್ಕಾರ ಮಾರುಕಟ್ಟೆ ಸೌಲಭ್ಯವನ್ನು ಕಲ್ಪಿಸಿದೆಯೇ ;

ಊ) ಹಾಗಿದ್ದಲ್ಲಿ, ಯಾವ ಯಾವ ಪ್ರದೇಶಗಳಲ್ಲಿ ಕಲ್ಪಿಸಲಾಗಿದೆ ; (ಜಿಲ್ಲಾವಾರು ವಿವರಗಳನ್ನು ನೀಡುವುದು)

ಋ) ಮೀನು ಸಾಕಾಣಿಕೆ ಮಾಡುವವರಿಗೆ ಉಚಿತವಾಗಿ ಮೀನಿನ ಮರಿಗಳನ್ನು ನೀಡಲು ಸರ್ಕಾರ ಅನುಸರಿಸುವ ಮಾನದಂಡಗಳೇನು ; (ವಿವರಗಳನ್ನು ನೀಡುವುದು) ?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಮೀನುಗಾರಿಕೆ ಸಚಿವರು):

ಅ) ಹೈದರಾಬಾದ್-ಕರ್ನಾಟಕದಲ್ಲಿ ಸರ್ಕಾರಿ ಮೀನು ಸಾಕಾಣಿಕೆ ಕೇಂದ್ರಗಳಿರುವುದಿಲ್ಲ. ಖಾಸಗಿ ಮೀನು ಸಾಕಾಣಿಕೆ ಕೇಂದ್ರಗಳಿರುತ್ತವೆ.

ಜಿಲ್ಲಾವಾರು ವಿವರ ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಸಂಖ್ಯೆ
1	ಬೀದರ್	9
2	ಗುಲ್ಬರ್ಗಾ	4
3	ಯಾದಗಿರ್	8
4	ರಾಯಚೂರು	1220
5	ಕೊಪ್ಪಳ	40
6	ಬಳ್ಳಾರಿ	410

ಆ) ಮೀನು ಸಾಕಾಣಿಕೆ ಮಾಡುವ ಮೀನುಗಾರರಿಗೆ ಈ ಕೆಳಗಿನ ಸೌಲಭ್ಯವನ್ನು ನೀಡಲಾಗುತ್ತದೆ.

* ಮೀನು ಕೊಳ ನಿರ್ಮಾಣಕ್ಕೆ ಪ್ರತಿ ಎಕರೆಗೆ ರೂ. 10,000/–ಗಳ ಸಹಾಯಧನ.

* ಹುಲ್ಲುಗೆಂಡೆ ಮೀನುಮರಿ ಬಿತ್ತನೆಗಾಗಿ ರೂ. 5,000/–ಗಳ ಸಹಾಯಧನ.

* ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ 250 ಸಾಮಾನ್ಯ ಗೆಂಡೆ ಮೀನುಮರಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

* ಸಿಹಿ ನೀರು ಸೀಗಡಿ ಕೃಷಿಗೆ ಪ್ರತಿ ಎಕರೆಗೆ ರೂ. 20,000/–ಗಳ ಸಹಾಯಧನ.

* ಜೌಗು ಮತ್ತು ಚೌಳು ಪ್ರದೇಶದಲ್ಲಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಪ್ರತಿ ಎಕರೆಗೆ ರೂ. 30,000/–ಗಳ ಸಹಾಯಧನ.

* ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಮೀನು ಕೃಷಿ ಕೊಳ ನಿರ್ಮಾಣಕ್ಕಾಗಿ ಪ್ರತಿ ಹೆಕ್ಟೇರ್‌ಗೆ ರೂ. 60,000/–ಗಳು ಹಾಗೂ ಕೊಳಗಳ ನವೀಕರಣಕ್ಕಾಗಿ ರೂ. 15,000/–ಗಳ ಸಹಾಯಧನ.

* ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ನೆರವಿನ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ.

* ಮೀನುಮರಿ ಖರೀದಿಸಲು ಅದರ ಬೆಲೆಯ ಶೇ. 50ರಷ್ಟು ಹಾಗೂ ವ್ಯಕ್ತಿಗಳಿಗೆ ಗರಿಷ್ಠ ರೂ. 5,000/– ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ. 20,000/–ರಂತೆ ಸಹಾಯಧನವನ್ನು ನೀಡಲಾಗುತ್ತಿದೆ.

* ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ನೆರವಿನಿಂದ 1000 ಹೆಕ್ಟೇರ್ ಒಳಗಿನ ವಿಸ್ತೀರ್ಣದ ಕೆರೆಗಳಿಗೆ ಪ್ರತಿ ಹೆಕ್ಟೇರಿಗೆ 2000 ಬೆರಳುದ್ದದ ಮೀನು ಮರಿಗಳನ್ನು ಇಲಾಖಾ ವತಿಯಿಂದ ದಾಸ್ತಾನು ಮಾಡಲಾಗುತ್ತಿದೆ.

ಇ) ಹೌದು.

ಈ) ಮೀನು ಸಾಕಾಣಿಕೆ ಮಾಡುವ ಕೃಷಿಕ / ಮೀನುಗಾರರು ಸ್ವಂತ ಅಥವಾ ಬ್ಯಾಂಕು ಸಾಲ ಪಡೆದಲ್ಲಿ ಸಹಾಯಧನದ ಪ್ರಮಾಣವನ್ನು ಕ್ರ.ಸಂ. (ಆ)ರಲ್ಲಿ ವಿವರಿಸಿದಂತೆ ನೀಡಲಾಗುತ್ತಿದೆ.

ಉ) ಹೌದು.

ಊ) ಜಿಲ್ಲಾವಾರು ಮಾಹಿತಿಯನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಸಂಖ್ಯೆ
1	ರಾಯಚೂರು	2
2	ಬಳ್ಳಾರಿ	2

ಋ) (ಅ) ಬಾವಿ ಹೊಂಡವಿರುವ ರೈತರು ಆರ್‌ಟಿಸಿ ನೀಡಿದಲ್ಲಿ 250 ಸಾಮಾನ್ಯ ಗೆಂಡೆ ಮೀನು ಮರಿಗಳನ್ನು ಉಚಿತವಾಗಿ ನೀಡಲಾಗುವುದು.

(ಆ) ಕೆರೆಯನ್ನು ಗುತ್ತಿಗೆ ಅಥವಾ ಟೆಂಡರ್–ಕಂ–ಹರಾಜು ಮೂಲಕ ಪಡೆದುಕೊಂಡವರಿಗೆ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ ನೆರವಿನಿಂದ ಒಂದು ಸಾರಿ ಮಾತ್ರ ಮೀನು ಮರಿಗಳನ್ನು ಇಲಾಖಾ ವತಿಯಿಂದ ದಾಸ್ತಾನು ಮಾಡಲಾಗುತ್ತಿದೆ.

ಸಹಕಾರ ಬ್ಯಾಂಕುಗಳಿಂದ ರೈತರಿಗೆ ನೀಡಿರುವ ಸಾಲ

3 (26) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ): ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಸಹಕಾರ ಬ್ಯಾಂಕುಗಳಿಂದ ನೀಡಿರುವ ಸಾಲದ ಮೊತ್ತವೆಷ್ಟು ; (ಬ್ಯಾಂಕು, ಜಿಲ್ಲಾ ಹಾಗೂ ತಾಲ್ಲೂಕುವಾರು ಕಳೆದ ಎರಡು ವರ್ಷಗಳ ವಿವರಗಳನ್ನು ನೀಡುವುದು)

ಆ) ಸಹಕಾರ ಬ್ಯಾಂಕುಗಳು ರೈತರ ಸಾಲದ ಮೇಲೆ ಪಡೆದ ಬಡ್ಡಿಯ ಮೊತ್ತವೆಷ್ಟು ; (ಬ್ಯಾಂಕು, ಜಿಲ್ಲಾ ಹಾಗೂ ತಾಲ್ಲೂಕುವಾರು ಕಳೆದ ಎರಡು ವರ್ಷಗಳ ವಿವರಗಳನ್ನು ನೀಡುವುದು)

ಇ) ರಾಜ್ಯದಲ್ಲಿ ಪ್ರಸ್ತುತವಿರುವ ಅರ್ಬನ್ ಬ್ಯಾಂಕ್, ಸಹಕಾರಿ ಬ್ಯಾಂಕು, ಮತ್ತು ಕ್ರೆಡಿಟ್ ಕೋ–ಆಪರೇಟಿವ್ ಬ್ಯಾಂಕುಗಳ ಸಂಖ್ಯೆ ಎಷ್ಟು ಮತ್ತು ಯಾವುವು ; (ತಾಲ್ಲೂಕುವಾರು ಪೂರ್ಣ ವಿವರಗಳನ್ನು ನೀಡುವುದು)

ಈ) ಈ ಪೈಕಿ ಪ್ರಸ್ತುತ ಲಾಭದಲ್ಲಿರುವ ಬ್ಯಾಂಕುಗಳು ಎಷ್ಟು ಮತ್ತು ಯಾವುವು ; ನಷ್ಟದಲ್ಲಿರುವ ಬ್ಯಾಂಕುಗಳು ಎಷ್ಟು ಮತ್ತು ಯಾವುವು ; (ವಿವರಗಳನ್ನು ನೀಡುವುದು)